## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\3011\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:02/04/2019

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಜೆ.ಎಂ.ರಾಜಶೇಖರ್, #36, ಮೌಂಟ್ ವಿವ್ಯೂ ಶಾಲಾ ಕ್ರಾಸ್, ಹುಣಸೀಕಟ್ಟಿ ರಸ್ತೆ, ರಾಣೇಬೆನ್ನೂರು ತಾಲ್ಲೂಕ್, ಹಾವೇರಿ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ ಹುಣಸೀಕಟ್ಟಿ ರಸ್ತೆ ಮೌಂಟ್ ವಿವ್ಯೂ ಶಾಲಾ ಕ್ರಾಸ್ #36ರ ನಿವಾಸಿಯಾದ ಶ್ರೀ.ಜೆ.ಎಂ.ರಾಜಶೇಖರ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ 1) ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಡಿ.ಸಿ.ಬಸವರಾಜಪ್ಪ, 2) ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ.ಐ.ಹೆಚ್.ಮುಜಾವರ [ಪ್ರಸ್ತುತ ನಿವೃತ್ತ], ಚೌಡಯ್ಯದಾನಪುರ ನಿವಾಸಿಗಳಾದ 3)ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ ಮತ್ತು 4) ಶ್ರೀ.ವೀರಣ್ಣ ನಾಗಪ್ಪ ಬನ್ನಿಮಟ್ಟಿ (ಇನ್ನು ಮುಂದೆ ಕ್ರಮವಾಗಿ, '1 ರಿಂದ 4ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕ್ ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟ ಬಸವ ವಸತಿ ಯೋಜನೆ ಅಡಿ 3 ಮತ್ತು 4ನೇ ಎದುರುದಾರರು ನೀಡಿದ ಸುಳ್ಳು ಮಾಹಿತಿಯ ಆಧಾರದ ಮೇಲೆ 1 ಮತ್ತು 2ನೇ ಎದುರುದಾರರು ವಸತಿ ಮಂಜೂರು ಮಾಡಿದ್ದಾರೆ. ಅದೇ ರೀತಿ, ಸುಳ್ಳು ಮಾಹಿತಿ ನೀಡಿ ಬಿಲ್ ಅನ್ನು ಸಹ ಪಾಸ್ ಮಾಡಿ ಸರ್ಕಾರಕ್ಕೆ ₹75,000/-ಗಳನ್ನು ವಂಚಿಸಿದ್ದಾರೆ. 3 ಮತ್ತು 4ನೇ ಎದುರುದಾರರು ವಸತಿಹೀನರಲ್ಲದಿದ್ದರೂ, ಸರ್ಕಾರದ ವಸತಿ ಯೋಜನೆಯ ಲಾಭ ಪಡೆಯಲು ಖೊಟ್ಟಿ ದಾಖಲೆ ಸೃಷ್ಟಿಸಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ 1 ಮತ್ತು 2ನೇ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರುದಾರರು ತಮ್ಮ ಪತ್ರ ದಿನಾಂಕ:25/08/17ರಲ್ಲಿ ಕಾರ್ಯಾಲಯಕ್ಕೆ ದೂರು ಸಲ್ಲಿಸಿ, 4ನೇ ಎದುರುದಾರರು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ರಾಣೇಬೆನ್ನೂರು ತಹಶೀಲ್ದಾರರಿಂದ ಬಿಪಿಎಲ್ ಪಡಿತರ ಚೀಟಿ ಪಡೆದಿದ್ದಾರೆಂದು ಆಪಾದಿಸಿದ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ರಾಣೇಬೆನ್ನೂರು ತಹಶೀಲ್ದಾರರ ಕಛೇರಿಯಿಂದ ಪೋಲೀಸ್ ದೂರು ನೀಡಿದೆ. ಮುಂದುವರೆದು, ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ ಇವರು 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾತಿ ಮಾಡಿಸಿಕೊಂಡು ₹75,000/–ಗಳನ್ನು ಸರ್ಕಾರಕ್ಕೆ ವಂಚಿಸಿ, ಪಡೆದು ಬೇರೆಯವರ ಮನೆ ಮುಂದೆ ನಿಂತು ಜಿಪಿಎಸ್ ಛಾಯಾಗ್ರಹಣ ಮಾಡಿರುವುದು ತಿಳಿದು ಬಂದ ಮೇರೆಗೆ ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ವರದಿ ಪಡೆದು ಸದರಿ ವರದಿಯನ್ನು ಹಾವೇರಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿದೆ. ಸದರಿಯವರಿಂದ ನಿರ್ದೇಶನ ಬಂದ ತಕ್ಷಣ ಮುಂದಿನ ಕಾನೂನು ಕ್ರಮ ವಹಿಸಲಾಗುವುದೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಮ್ಮ ಸೇವಾವಧಿಯಲ್ಲಿ ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಚೌಡಯ್ಯದಾನಪುರ ಗ್ರಾಮದ ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ ರವರಿಗೆ 2010–11ನೇ ಸಾಲಿನ ಬಸವ ವಸತಿ ಯೋಜನೆಯಡಿ ಮನೆ ಮಂಜೂರಾತಿಯನ್ನು ಮಾಡುವ ಬಗ್ಗೆ ದಿನಾಂಕ:02/11/11ರಂದು ನಡೆದ ಗ್ರಾಮಸಭೆಯಲ್ಲಿ ತೀರ್ಮಾನವಾಗಿದ್ದು, ಸದರಿಯವರು ಬಡತನ ರೇಖೆ ಕೆಳಗಿನ ಕುಟುಂಬಕ್ಕೆ ಸೇರಿದ ಬಗ್ಗೆ ರಾಣೇಬೆನ್ನೂರು ತಹಶೀಲ್ದಾರರಿಂದ ಬಿಪಿಎಲ್ ಕಾರ್ಡನ್ನು ಹೊಂದಿದ್ದಾರೆ. ಗ್ರಾಮಸಭೆಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳ ಪಟ್ಟಿ ದಿನಾಂಕ:23/04/12ರಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಅನುಮೋದನೆಗೊಂಡಿದೆ. ನಂತರದಲ್ಲಿ ತಮಗೆ ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್‌ನಿಂದ ವರ್ಗಾವಣೆಯಾಗಿದೆ. ಸದರಿ ಪಂಚಾಯತ್‌ನಲ್ಲಿ ತಾವು ಕಾರ್ಯನಿರ್ವಹಿಸುವ ಸಮಯದಲ್ಲಿ ಮನೆ ನಿರ್ಮಾಣ ಮಾಡುವ ಬಗ್ಗೆ ಜಿಪಿಎಸ್ ಮಾಡುವುದಾಗಲೀ, ಛಾಯಾಚಿತ್ರ ತೆಗೆಯುವುದಾಗಲೀ ಅಥವಾ ಫಲಾನುಭವಿಗೆ ಹಣ ಸಂದಾಯ ಮಾಡುವುದಾಗಲೀ ಆಗಿಲ್ಲವೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರದಲ್ಲಿ –

BSm/3011/17



1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಬಸವ ವಸತಿ ಯೋಜನೆ ಸೌಲಭ್ಯದ ಅನುದಾನವನ್ನು ದುರುಪಯೋಗ ಪಡಿಸಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ ರವರಿಗೆ ಗ್ರಾಮದಲ್ಲಿ ಸ್ವಂತ ಮನೆ ಇದೆಯೋ! ಇಲ್ಲವೋ! ಎಂಬುದನ್ನು ಖುದ್ದು ಪರಿಶೀಲನೆ ಮಾಡಬೇಕಿದ್ದು, 2ನೇ ಎದುರುದಾರರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಸದರಿ ಫಲಾನುಭವಿಗೆ 2ನೇ ಎದುರುದಾರರು ಸಹಕಾರ ನೀಡಿರುವುದು ಸದರಿ ಪ್ರಕರಣದಲ್ಲಿ ಎದ್ದು ಕಾಣಿಸುತ್ತದೆ. ತಮ್ಮ ದೂರಿನಲ್ಲಿರುವ ಆರೋಪಗಳು ಸತ್ಯವೆಂದು 1ನೇ ಎದುರುದಾರರ ಆಕ್ಷೇಪಣೆಯಲ್ಲಿ ಸಾಬೀತಾಗಿರುವುದರಿಂದ, ಎದುರುದಾರರ ಮೇಲೆ ಕಾನೂನು ಕ್ರಮ ಜರುಗಿಸಲು ಕೋರಿದ್ದಾರೆ.

6. 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟು, ದಿನಾಂಕ:06/04/12ರಂದು ತಾಲ್ಲೂಕ್ ಪಂಚಾಯತ್, ರಾಣೇಬೆನ್ನೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಶ್ರೀ.ಬಿ.ಬಿ.ದೇವೂರ ರವರನ್ನು 1ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ –

ದಿನಾಂಕ:02/11/11ರಂದು ಚಿಕ್ಕ ಕುರುವತ್ತಿ ಗ್ರಾಮ ಪಂಚಾಯತ್‌ನ ಗ್ರಾಮಸಭೆಯಲ್ಲಿ ಬಸವ ವಸತಿ ಯೋಜನೆ ಅಡಿ ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ ರವರ ಸಮೇತ ಅನೇಕ ಫಲಾನುಭವಿಗಳ ಹೆಸರುಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಂತಿಮಗೊಳಿಸಿದ್ದು, ಸದರಿ ಪಟ್ಟಿಯನ್ನು ತಾಲ್ಲೂಕ್ ಪಂಚಾಯತ್ ಕಛೇರಿಗೆ ಕಳುಹಿಸಿದಾಗ, ಆ ಪಟ್ಟಿಯನ್ನು ಮುಂದಿನ ಕ್ರಮಕ್ಕಾಗಿ ಜಿಲ್ಲಾ ಪಂಚಾಯತ್‌ನ ಕಾರ್ಯಾಲಯಕ್ಕೆ ಕಳುಹಿಸಿ ಕೊಡಲಾಗಿದೆ. ತಾವು ದಿನಾಂಕ:30/04/12ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ದೂರಿನಲ್ಲಿ ತಮ್ಮ ಹೆಸರನ್ನು ಪ್ರಸ್ತಾಪಿಸಿಲ್ಲ. ದೂರಿನ ಎಲ್ಲಾ ಪ್ರಕ್ರಿಯೆಗಳು ತಾವು ನಿವೃತ್ತಿಯಾದ 5 ವರ್ಷಗಳ ನಂತರ ನಡೆದಿದೆಯೆಂದು ಹೇಳಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಮೂರನೇ (3ನೇ) ಎದುರುದಾರರಾದ ಶ್ರೀಮತಿ.ವಿಜಯಶ್ರೀ ವೀರಣ್ಣ ಬನ್ನಿಮಟ್ಟಿ, ಚೌಡಯ್ಯದಾನಪುರ, ರಾಣೇಬೆನ್ನೂರು ತಾಲ್ಲೂಕ್ ರವರು ತಮ್ಮ ಪತಿ 4ನೇ ಎದುರುದಾರರಾದ ಶ್ರೀ.ವೀರಣ್ಣ ನಾಗಪ್ಪ ಬನ್ನಿಮಟ್ಟಿ ಮತ್ತು 2ನೇ ಎದುರುದಾರರ ಸಹಕಾರದೊಂದಿಗೆ ಬಸವ ವಸತಿ ಯೋಜನೆಯಡಿ ದುರ್ಲಾಭ ಪಡೆಯುವ ಉದ್ದೇಶದಿಂದ ರಾಣೇಬೆನ್ನೂರು ತಹಶೀಲ್ದಾರ್‌ರಿಂದ ಬಿಪಿಎಲ್ ಪಡಿತರ ಚೀಟಿಯನ್ನು ಪಡೆದು 2010–11ನೇ ಸಾಲಿನಲ್ಲಿ ಫಲಾನುಭವಿಯಾಗಿ ಆಯ್ಕೆಗೊಂಡು ಸರ್ಕಾರದಿಂದ ₹75,000/–ವನ್ನು ಮಂಜೂರು ಮಾಡಿಸಿ, ಮನೆ ಕಟ್ಟದೇ, ಬೇರೆ ಯಾರದ್ದೋ ಮನೆಯ ಮುಂದೆ ನಿಂತು ಜಿಪಿಎಸ್ ಛಾಯಾಗ್ರಹಣ ಮಾಡಿದ್ದಾರೆಂದು ಆಪಾದಿಸಿ, ಸದರಿಯವರ ವಿರುದ್ಧ ಕ್ರಮ ಜರುಗಿಸಲು ಕೋರಿ,

ದಿನಾಂಕ:25/08/17ರಂದು ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ರಾಣೇಬೆನ್ನೂರು ರವರಿಗೆ "ಸಾರ್ವಜನಿಕ ಹಿತಾಸಕ್ತಿ" ದೂರನ್ನು ನೀಡಿದ್ದಾರೆ;

2) ಸದರಿ ದೂರಿನ ನೈಜತೆಯನ್ನು ಖುದ್ದಾಗಿ ಪರಿಶೀಲಿಸಿ, ವರದಿ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ರಾಣೇಬೆನ್ನೂರು ರವರು ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಗೆ ಪತ್ರ ಸಂಖ್ಯೆ:ತಾಪಂರಾ\ವಸತಿ\ಗ್ರಾಪಂಚಿ\ವಹಿ\17-18 ದಿ:17/10/17 ರಲ್ಲಿ ಸೂಚಿಸಿದಂತೆ ದಿನಾಂಕ:26/10/17ರಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪಂಚಾಯತ್‌ನ ಸದಸ್ಯರು ಮತ್ತು ಸಾರ್ವಜನಿಕರ ಸಮಕ್ಷಮ ಸ್ಥಳ ಪರಿಶೀಲಿಸಿ, 3ನೇ ಎದುರುದಾರರು 2010-11ನೇ ಸಾಲಿನಲ್ಲಿ ಮನೆ ಮಂಜೂರು ಮಾಡಿಸಿಕೊಂಡ ಬಳಿಕ ಶ್ರೀ.ರಾಮಕೃಷ್ಣಪ್ಪ ಶಿವಪ್ಪ ಕಾಗದಗಾರ ರವರ ಮನೆಗೆ ಜಿಪಿಎಸ್ ಮಾಡಿಸಿ, ಹಣ ಪಡೆದಿದ್ದಾರೆ ಮತ್ತು ಸದರಿ ಮನೆಯಲ್ಲಿ ಹಾಲೀ ಶ್ರೀ.ಅಜ್ಜಪ್ಪ ನರಸಿಂಹಪ್ಪ ಕಾಗದಗಾರ ರವರು ವಾಸ ಮಾಡುತ್ತಿದಾರೆಂದು ಪತ್ರ ಸಂಖ್ಯೆ:ಚಿಗ್ರಾಪಂ\ಪ.ವ\17-18 ದಿನಾಂಕ:28/10/17ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ರಾಣೇಬೆನ್ನೂರು ರವರಿಗೆ ವರದಿಯನ್ನು ಸಲ್ಲಿಸಿದ್ದಾರೆ;

3) ಮೂರನೇ (3ನೇ) ಎದುರುದಾರರ ಪತಿ 4ನೇ ಎದುರುದಾರರು ಹಾವೇರಿ ತಾಲ್ಲೂಕ್ ಕಂಚಾರಗಟ್ಟಿ ಗ್ರಾಮದ ಸರಹದ್ದಿನಲ್ಲಿ 8 ಎಕರೆ 5 ಗುಂಟೆ ಜಮೀನು ಹೊಂದಿದ್ದು, ಸದರಿಯವರು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅನರ್ಹರಾಗಿದ್ದರೂ ಸಹ ದಿನಾಂಕ:05/12/11ರಂದು ಚೌಡಯ್ಯದಾನಪುರ ಗ್ರಾಮದಲ್ಲಿ ಸುಳ್ಳು ಹೇಳಿ ಅರ್ಜಿ ಸಲ್ಲಿಸಿ, ಬಿಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಂಡು ಸರ್ಕಾರದ ಸವಲತ್ತುಗಳನ್ನು ಪಡೆದುಕೊಂಡು ಮೋಸ ಮಾಡಿದ್ದಾರೆಂದು ಆಪಾದಿಸಿ, ಸದರಿ 4ನೇ ಎದುರುದಾರರ ವಿರುದ್ಧ ರಾಣೇಬೆನ್ನೂರು ಆಹಾರ ನಿರೀಕ್ಷಕರು ದಿನಾಂಕ:23/08/17ರಂದು ರಾಣೇಬೆನ್ನೂರು ಗ್ರಾಮಾಂತರ ಠಾಣೆಗೆ ನೀಡಿದ ದೂರಿನನ್ವಯ ಅಪರಾಧ ಸಂಖ್ಯೆ:234/2017 ದಾಖಲಾಗಿದೆ. ಸದರಿ ಪ್ರಕರಣವು ರಾಣೇಬೆನ್ನೂರು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಸಿಸಿ ನಂ.894/2018ರಂತೆ [ಅವಶ್ಯಕ ಸರಕುಗಳ ಅಧಿನಿಯಮ, ಕಲಂ 7 ಮತ್ತು ಐಪಿಸಿ ಕಲಂ 420 ರಡಿ] ಪ್ರಕರಣ ದಾಖಲಾಗಿ, ವಿಚಾರಣೆಯಲ್ಲಿದೆ;

4) ಮೂರನೇ (3ನೇ) ಎದುರುದಾರರನ್ನು ಬಸವ ವಸತಿ ಯೋಜನೆ ಅಡಿ ಫಲಾನುಭವಿಯಾಗಿ ಆಯ್ಕೆ ಮಾಡುವ ಸಮಯದಲ್ಲಿ 2ನೇ ಎದುರುದಾರರು ಚಿಕ್ಕಕುರುವತ್ತಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿ/ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರೆಂದು ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದಾರೆ. ದಿನಾಂಕ:02/11/11ರಂದು ನಡೆದ ಗ್ರಾಮಸಭೆಯಲ್ಲಿ ಸದರಿ 3ನೇ ಎದುರುದಾರರು ಮತ್ತು ಇತರರನ್ನು ಫಲಾನುಭವಿಯೆಂದು ಆಯ್ಕೆ ಮಾಡಿರುವುದು ಗ್ರಾಮಸಭೆಯ ಠರಾವಿನ ಪ್ರತಿಯಲ್ಲಿ ಕಂಡು ಬಂದಿದೆ. "ಅರ್ಹ ವಸತಿ ರಹಿತರನ್ನೇ ಆಯ್ಕೆ ಮಾಡಿ ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಠರಾವು ಹೊರಡಿಸಿರುವುದನ್ನು ಮತ್ತು ದಾಖಲೀಕರಣ ಪ್ರಕ್ರಿಯೆ ಪೂರ್ಣಗೊಳಿಸಿರುವ ಬಗ್ಗೆ ಫಲಾನುಭವಿವಾರು ವಿವರಗಳನ್ನು ಪರಿಶೀಲಿಸಿ ದೃಢೀಕರಿಸಲಾಗಿದೆ" ಎಂದು ಸದರಿ ಫಲಾನುಭವಿಗಳ ವಿವರವಿರುವ ಪಟ್ಟಿಯನ್ನು (ನಮೂನೆ-17) 1ನೇ ಎದುರುದಾರರು ದೃಢೀಕರಿಸಿದ್ದಾರೆ;

BSM /30/1/17



5) ಸದರಿಯವರು ಫಲಾನುಭವಿಯಾಗಿ ಆಯ್ಕೆಯಾದ ನಂತರ ಆಸ್ತಿ ಸಂಖ್ಯೆ:122ಎ/1ರಲ್ಲಿ ಮನೆ ಕಟ್ಟಲು ದಿನಾಂಕ:06/06/11ರಂದು 2ನೇ ಎದುರುದಾರರು ಪರವಾನಗಿಯನ್ನು ನೀಡಿದ್ದಾರೆ. ನಂತರ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ 3ನೇ ಎದುರುದಾರರು ಒಟ್ಟು ₹75,000/- ಸಹಾಯಧನವನ್ನು [ಫಲಾನುಭವಿ ಕೋಡ್ ಸಂಖ್ಯೆ:122546] ಕಂತುಗಳಲ್ಲಿ ಪಡೆದಿರುವುದು ಕಂಡು ಬಂದಿದೆ. ಸದರಿಯವರು ಮನೆ ನಿರ್ಮಾಣ ಮಾಡದೇ ಶ್ರೀ.ರಾಮಕೃಷ್ಣಪ್ಪ ಶಿವಪ್ಪ ಕಾಗದಗಾರ ರವರ ಮನೆಗೆ ಜಿಪಿಎಸ್ ಮಾಡಿಸಿ, ನಿಗಮದಿಂದ ಸಹಾಯ ಧನ ಪಡೆದಿರುವುದು ಪ್ರಾಥಮಿಕ ಹಂತದ ತನಿಖೆ \ ಸ್ಥಳ ತನಿಖೆಯಿಂದ ಸಾಬೀತಾಗಿದೆ;

6) ಮೂರನೇ (3ನೇ) ಎದುರುದಾರರು ಸುಳ್ಳು ಹೇಳಿ ಪಡೆದ ಬಿಪಿಎಲ್ ಪಡಿತರ ಚೀಟಿಯ ಆಧಾರದ ಮೇಲೆ ಸದರಿಯವರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಿದ್ದು ಕಂಡು ಬಂದಿದೆ. ಯಾವುದೇ ವಸತಿ ಯೋಜನೆ ಅಡಿ ಫಲಾನುಭವಿ ಆಯ್ಕೆ ಪೂರ್ವದಲ್ಲಿ ಸದರಿ ವ್ಯಕ್ತಿಯು ಫಲಾನುಭವಿಯಾಗಿ ಆಯ್ಕೆಗೊಳ್ಳಲು ಅರ್ಹತೆ ಇದೆಯೇ! ಅಥವಾ ಇಲ್ಲವೋ! ಎಂಬುದನ್ನು ಖುದ್ದು ಪರಿಶೀಲಿಸ ಬೇಕಾಗಿರುವುದು ಸಂಬಂಧಪಟ್ಟ ಪಂಚಾಯತ್‌ನ ಕಾರ್ಯದರ್ಶಿ\ ಅಭಿವೃದ್ಧಿ ಅಧಿಕಾರಿಯವರ ಕರ್ತವ್ಯವಾಗಿದೆ. ಸದರಿ ಕರ್ತವ್ಯವನ್ನು 2ನೇ ಎದುರುದಾರರು ನಿರ್ವಹಿಸದೇ ಅಥವಾ ಸತ್ಯಾಂಶವನ್ನು ಪಂಚಾಯತ್ ಗ್ರಾಮಸಭೆಯಲ್ಲಿ ಮಂಡಿಸದೇ 3ನೇ ಎದುರುದಾರರನ್ನು ವಸತಿ ಯೋಜನೆಯ ಫಲಾನುಭವಿಯೆಂದು ಆಯ್ಕೆ ಮಾಡಲು ಸಹಕರಿಸಿ, ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. 3ನೇ ಎದುರುದಾರರಿಗೆ ವಸತಿ ನಿಗಮದಿಂದ ಸಹಾಯ ಧನ ಬಿಡುಗಡೆಗೊಂಡಿರುವಲ್ಲಿ 1ನೇ ಎದುರುದಾರರ ಪಾತ್ರ ಇಲ್ಲದಿರುವುದು ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಆದ್ದರಿಂದ, 3ನೇ ಎದುರುದಾರರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ ಪಡೆದ ₹75,000/- ಸಹಾಯಧನವನ್ನು ಬಡ್ಡಿ ಸಮೇತ ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 3/4

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.

1/02/04